## ಕರ್ನಾಟಕ ಸರ್ಕಾರ ನಡವಳಿಗಳು

**ವಿಷಯ:** ಖಜಾನೆಗಳಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:27-01-2021.
2) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:04.03.2021.
3) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:08.03.2021.
4) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:12.03.2021.
5) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:17.03.2021.
6) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:19.03.2021.
7) ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ದಿನಾಂಕ:24.03.2021.

* * * * *

**ಪ್ರಸ್ತಾವನೆ:-**

2020-21ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಖಜಾನೆಗಳಲ್ಲಿ ಸ್ವೀಕರಿಸಿ ತೀರ್ಣಗೊಳಿಸಿ ದಿ:31-03-2021 ರಂದೇ 2020-21ನೇ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸಲು ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ ಕಾಲಮಿತಿ ಸೂಚಿಸಿ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿತ್ತು.

ಉಲ್ಲೇಖ (2), (3), (4), (5), (6) ಮತ್ತು (7) ರ ಆದೇಶಗಳಲ್ಲಿ ವಿವಿಧ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವ ದಿನಾಂಕವನ್ನು 26.03.2021 ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ.

ದಿನಾಂಕ:19.03.2021 ರ ಪತ್ರದಲ್ಲಿ ಆರ್ಥಿಕ ಇಲಾಖೆಯು ಹೊರಡಿಸುವ ಮರುವಿನಿಯೋಗದ ಆದೇಶಗಳನ್ನು ದಿನಾಂಕ:29.03.2021 ರವರೆಗೆ ಪುರಸ್ಕರಿಸಲು ಸೂಚಿಸಲಾಗಿರುತ್ತದೆ. ವಿವಿಧ ಇಲಾಖೆಗಳಿಂದ ಮರುವಿನಿಯೋಗಕ್ಕಾಗಿ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುವುದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಇ 01 ಬಿಪಿಇ 2021, ಬೆಂಗಳೂರು, ದಿನಾಂಕ:29-03-2021**

2020-21 ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯಿಂದ ಮರುವಿನಿಯೋಗಕ್ಕೆ ಸಂಬಂಧಪಟ್ಟಂತೆ ಹೊರಡಿಸಲ್ಪಡುವ ಆದೇಶಗಳ ಮೇಲೆ ಸಲ್ಲಿಸುವ ಬಿಲ್ಲುಗಳನ್ನು ದಿನಾಂಕ:31.03.2021 ರ ಮಧ್ಯಹ್ನ 2.30 ವರೆಗೆ ಖಜಾನೆಯಲ್ಲಿ ಸ್ವೀಕರಿಸುವಂತೆ ಎಲ್ಲಾ ಖಜಾನಾಧಿಕಾರಿಗಳಿಗೆ ಸೂಚಿಸುವಂತೆ ಆದೇಶಿಸಿದೆ.

ಕೇಂದ್ರದಿಂದ ಅನುದಾನ ಸ್ವೀಕೃತಿ ಸಂದರ್ಭಗಳಲ್ಲಿ ಹಾಗೂ ಅತ್ಯಂತ ಅವಶ್ಯಕ ಸಂದರ್ಭಗಳಲ್ಲಿ ಮಾತ್ರ ಉಳಿತಾಯವೆಂದು ಗುರುತಿಸಲಾಗಿರುವ ಅನುದಾನವನ್ನು ಮಾರ್ಚ್ ತಿಂಗಳಿನಲ್ಲಿ ಮುನಃಸ್ಥಾಪಿಸಲು (Restore) ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದು ಬಿಡುಗಡೆ ಆದೇಶ ಹೊರಡಿಸಿ, ಆದೇಶದ ಪ್ರತಿ / ಹಿಂಬರಹವನ್ನು / ಬಿಲ್ಲುಗಳನ್ನು ಖಜಾನೆಗೆ ದಿನಾಂಕ:31.03.2021 ರ ಮಧ್ಯಹ್ನ 2.30 ರೊಳಗೆ ತಲಪಿಸುವಂತೆ ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ವೆಬ್ ಸೈಟ್ **www.finance.karnataka.gov.in** ನಿಂದ ಪಡೆಯಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್ ನಾಯಕ್. ಎಲ್)
ಸರ್ಕಾರದ ಉಪ ಕಾರ್ಯದರ್ಶಿ (ಬಿ & ಆರ್)
ಆರ್ಥಿಕ ಇಲಾಖೆ

ಇವರಿಗೆ:-

1) ಪ್ರಧಾನ ಮಹಾಲೇಖಪಾಲರು (A&E) / (G&SSA) / (E&RSA), ಕರ್ನಾಟಕ, ಬೆಂಗಳೂರು.

2) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ, ಬೆಂಗಳೂರು.

5) ಸರ್ಕಾರದ ಎಲ್ಲಾ ಅಪರ / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

6) ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.

7) ಲೋಕಾಯುಕ್ತರು, ಕರ್ನಾಟಕ, ಬೆಂಗಳೂರು.

8) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

9) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

10) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

11) ಆಯುಕ್ತರು, ಖಜಾನೆ ಇಲಾಖೆ, ಬೆಂಗಳೂರು.

12) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

13) ಎಲ್ಲಾ ಇಲಾಖಾ ಮುಖ್ಯಸ್ಥರು.

14) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.